# ತುಮಕೂರು(ದ)

# ಶೈಕ್ಷಣಿಕ ಜಿಲ್ಲೆಯ

# ಸಂಕ್ಷಿಪ್ತ

# ಪಕ್ಷಿನೋಟ

# <u>ಜಿಲ್ಲಾ ಪಂಚಾಯತ್ ತುಮಕೂರು</u>
# <u>ಉಪನಿರ್ದೇಶಕರ ಕಛೇರಿ ಸಾರ್ವಜನಿಕ ಶಿಕ್ಷಣ ಇಲಾಖೆ, ತುಮಕೂರು (ದ) ಜಿಲ್ಲೆ.</u>

## <u>ಜಿಲ್ಲೆಯ ಕಿರು ಪರಿಚಯ</u>

ತುಮಕೂರು ಜಿಲ್ಲೆ ಸುಜನ ಜನಪದ ಜಿಲ್ಲೆ ಎಂದು ಹೆಸರಾಗಿದ್ದು, ಕಲ್ಪತರು ನಾಡೆಂದು ಕೀರ್ತಿ ಪಡೆದಿದೆ. ಶೈಕ್ಷಣಿಕ ಸುಧಾರಣೆಗಾಗಿ ತುಮಕೂರು ಜಿಲ್ಲೆಯನ್ನು ತುಮಕೂರು (ಉ) ಹಾಗೂ ತುಮಕೂರು (ದ) ಜಿಲ್ಲೆಯನ್ನಾಗಿ ವಿಂಗಡಿಸಲಾಗಿದೆ. ತುಮಕೂರು (ದ) ಜಿಲ್ಲೆಯು 6 ಶೈಕ್ಷಣಿಕ ವಲಯಗಳನ್ನು ಹೊಂದುವುದರೊಂದಿಗೆ ತುಮಕೂರು (ಉ) ವಲಯವು 4 ಶೈಕ್ಷಣಿಕ ವಲಯಗಳನ್ನು ಹೊಂದಿದೆ.

ಜಿಲ್ಲೆಯ ಭೌಗೋಳಿಕ ವಿಸ್ತೀರ್ಣ 10598 ಚ.ಕಿ.ಮಿ ಇದ್ದು, 12.45 ರಿಂದ 14.24 ಉತ್ತರ ಅಕ್ಷಾಂಶ ಮತ್ತು 76.20 ರಿಂದ 77.32 ಪೂರ್ವ ರೇಖಾಂಶಗಳ ನಡುವೆ ನೆಲೆಸಿದೆ. ಈಶಾನ್ಯಕ್ಕೆ ಆಂದ್ರಪ್ರದೇಶ, ಪೂರ್ವಕ್ಕೆ ಕೋಲಾರ, ದಕ್ಷಿಣಕ್ಕೆ ಮಂಡ್ಯ ಮತ್ತು ವಾಯುವ್ಯಕ್ಕೆ ಹಾಸನ ಹಾಗೂ ಚಿತ್ರದುರ್ಗ ಜಿಲ್ಲೆಗಳಿವೆ. ಈಶಾನ್ಯ ಭಾಗದ ಪಾವಗಡ ಇತರೆ ತಾಲ್ಲೂಕುಗಳಿಂದ ಪೂರ್ಣವಾಗಿ ಬೇರ್ಪಟ್ಟಿರುವುದು ವಿಶೇಷವಾಗಿದೆ.

ಜಿಲ್ಲೆಯಲ್ಲಿ ಕಾವೇರಿ,ಕೃಷ್ಣ, ಉತ್ತರ ಪಿನಾಕಿನಿ, ಜಲಾಯನ ಪ್ರದೇಶಗಳಿದ್ದು, ಶಿಂಷಾ, ಜಯಮಂಗಲಿ, ಸುವರ್ಣಮುಖಿ ನದಿಗಳು ಪ್ರಮುಖವಾಗಿವೆ. ಅಲ್ಲದೆ ದೇವರಾಯನದುರ್ಗ, ಮಧುಗಿರಿ ಏಕಾಶಿಲಾ ಬೆಟ್ಟ, ನಿಡಗಲ್ಲು ದುರ್ಗ, ಮಿಡಿಗೇಶೀ ದುರ್ಗ, ಹುಲಿಯೂರು ದುರ್ಗ, ಸಿದ್ದರಬೆಟ್ಟ ಮುಂತಾದವುಗಳು ಜಿಲ್ಲೆಯ ಪ್ರಸಿದ್ದ ಬೆಟ್ಟಗಳಾಗಿವೆ.

ತ್ರಿವಿಧ ದಾಸೋಹಿ, ಕರ್ನಾಟಕ ರತ್ನ **ಡಾ.ಶ್ರೀ.ಶ್ರೀ. ಶಿವಕುಮಾರ ಮಹಾ ಸ್ವಾಮಿಗಳು** ಕರ್ಮಭೂಮಿ, ಶ್ರೀ ಸಿದ್ಧಗಂಗಾ ಮಠ ಜಿಲ್ಲೆಯ ಕೀರ್ತಿ ರತ್ನವಾಗಿದೆ. ಶ್ರೀ ಎಡೆಯೂರು ಸಿದ್ಧಲಿಂಗೇಶ್ವರರು ನಡೆದಾಡಿದ ಪುಣ್ಯಭೂಮಿ, ನಾಟಕರತ್ನ ದಿವಂಗತ ಗುಬ್ಬಿ ವೀರಣ್ಣ, ಕನ್ನಡದ ಕಣ್ವ ಬಿ.ಎಂ.ಶ್ರೀ, ಹಾಗೂ ಆಚಾರ್ಯ ತಿ.ನಂ ಶ್ರೀ ಕಂಠಯ್ಯನವರು ಕವಿವರ್ಯರುದಿಸಿದ ಮಾತೃಜಿಲ್ಲೆ ತುಮಕೂರು.

2011ರ ಜನಗಣತಿ ಪ್ರಕಾರ ಜಿಲ್ಲೆಯ ಸಾಕ್ಷರತಾ ಪ್ರಮಾಣ ಶೇ 75.14 ರಷ್ಟಿದ್ದು, ಪುರುಷ ಸಾಕ್ಷರರು ಶೇ 82.81 ಹಾಗೂ ಮಹಿಳಾ ಸಾಕ್ಷರರನ್ನು ಶೇ 67.38 ರಷ್ಟು ಹೊಂದಿದೆ.

# ತುಮಕೂರು (ದ) ಶೈಕ್ಷಣಿಕ ಜಿಲ್ಲೆಯ ಸಾರ್ವಜನಿಕ ಶಿಕ್ಷಣ ಇಲಾಖೆಯ ಸಂಕ್ಷಿಪ್ತ ವಿವರ

## 1) ಉಪನಿರ್ದೇಶಕರ ಕಛೇರಿಯ ಸಿಬ್ಬಂಧಿ ವಿವರ

| ಕ್ರ.ಸಂ | ಹುದ್ದೆಯ ವಿವರ | ಮಂಜೂರು | ವರ್ಕಿಂಗ್ | ಖಾಲಿ |
|---|---|---|---|---|
| 1 | ಉಪನಿರ್ದೇಶಕರು (ಆಡಳಿತ) | 01 | 01 | – |
| 2 | ಶಿಕ್ಷಣಾಧಿಕಾರಿಗಳು | 02 | 02 | – |
| 3 | ಡಿವೈಪಿಸಿ ಎಸ್ಎಸ್ಎ ತುಮಕೂರು(ದ) | 01 | 01 | – |
| 4 | ಡಿವೈಪಿಸಿ ಆರ್ಎಂಎಸ್ಎ ತುಮಕೂರು(ದ) | 01 | 01 | – |
| 5 | ಶಿಕ್ಷಣಾಧಿಕಾರಿಗಳು (ಮ.ಉ.ಯೋ) | 01 | 01 | – |
| 6 | ವಿಷಯ ಪರಿವೀಕ್ಷಕರು | 05 | 05 | – |
| 7 | ಎಪಿಸಿ | 02 | 02 | – |
| 8 | ವೃತ್ತಿ ವಿಷಯ ಪರಿವೀಕ್ಷಕರು | 01 | 01 | – |
| 9 | ಪ್ರತಾಂಕಿತ ಸಹಾಯಕರು | 01 | – | 01 |
| 10 | ಅಧೀಕ್ಷಕರು | 03 | 03 | – |
| 11 | ಸಾಂಖ್ಯಿಕ ಅಧಿಕಾರಿಗಳು | 01 | 01 | – |
| 12 | ಪ್ರದಸ | 11 | 11 | – |
| 13 | ದ್ವಿದಸ | 07 | 07 | – |
| 14 | ಬೆರಳಚ್ಚುಗಾರ | 03 | – | 03 |
| 15 | ಡಿ ದರ್ಜೆ | 08 | 06 | 02 |
| 16 | ಸಿ.ಸಿ.ಟಿ | 01 | 01 | – |
| 17 | ವಾಹನ ಚಾಲಕರು | 01 | 01 | – |

## 2) ಶಾಲೆಗಳ ವಿವರ:–

| ಶಾಲೆಗಳ ವಿಧ | ಪ್ರಾಥಮಿಕ | ಪ್ರೌಢ | ಒಟ್ಟು |
|---|---|---|---|
| ಸರ್ಕಾರಿ | 2044 | 133 | 2177 |
| ಸಮಾಜ ಕಲ್ಯಾಣ ಇಲಾಖೆ | 33 | 14 | 47 |
| ಸ್ಥಳೀಯ ಸಂಸ್ಥೆ | – | – | – |
| ಅನುದಾನಿತ | 59 | 204 | 263 |
| ಅನುದಾನ ರಹಿತ | 283 | 126 | 409 |
| ಸೆಂಟ್ರಲ್ | 2 | 2 | 4 |

**3) ಮಕ್ಕಳ ವಿವರ:-(ಸಾಟ್ಸ್) :- ಅಕ್ಟೋಬರ್ 2017.**

| ತರಗತಿ | ಮಕ್ಕಳ ದಾಖಲಾತಿ | ಹಾಜರಾತಿ | ಶೇ. ಹಾಜರಿ |
|---|---|---|---|
| 1 ರಿಂದ 5 | 115081 | 114340 | 99.35 |
| 6 ರಿಂದ 8 | 71926 | 69589 | 96.75 |
| 9 ರಿಂದ 10 | 47525 | 47449 | 99.84 |
| 1 ರಿಂದ 10 | 234456 | 234180 | 99.88 |

**4) ಶಿಕ್ಷಕರ ಹುದ್ದೆಗಳ ಮಂಜೂರಿ ಮತ್ತು ಖಾಲಿ ಹುದ್ದೆಗಳ ವಿವರ:-**

| ವಿವರ | ಮಂಜೂರು | ಕಾರ್ಯನಿರ್ವಹಿಸುತ್ತಿರುವವರು | ಖಾಲಿ |
|---|---|---|---|
| ಸ.ಪ್ರಾಥಮಿಕ ಶಾಲಾ ಶಿಕ್ಷಕರು | 5995 | 5638 | 357 |
| ಸ.ಪ್ರೌ.ಶಾಲಾ ಶಿಕ್ಷಕರು | 1196 | 1071 | 125 |
| **ಒಟ್ಟು** | **6791** | **6709** | **482** |

**5) 2017-18 ನೇ ಸಾಲಿನಲ್ಲಿ ಸರಕಾರಿ ಪ್ರಾಥಮಿಕ ಮತ್ತು ಪ್ರೌಢ ಶಾಲೆಗಳಲ್ಲಿ ಅತಿಥಿ ಶಿಕ್ಷಕರ ನೇಮಕಾತಿ:-**

1. ಸರ್ಕಾರಿ ಪ್ರಾಥಮಿಕ ಶಾಲೆಗಳಲ್ಲಿ 358 ಅತಿಥಿ ಶಿಕ್ಷಕರನ್ನು ಮಂಜೂರು ಮಾಡಿದ್ದು, ಅದರಲ್ಲಿ 200 ಖಾಲಿ ಹುದ್ದೆಗಳಿಗೆ ಅತಿಥಿ ಶಿಕ್ಷಕರನ್ನು ನೇಮಕ ಮಾಡಿಕೊಳ್ಳಲಾಗಿದೆ. ಉಳಿಕೆ 158 ಹುದ್ದೆಗಳು ಹೆಚ್ಚುವರಿಯಾಗಿರುತ್ತವೆ.

2. ಸರ್ಕಾರಿ ಪ್ರೌಢ ಶಾಲೆಗಳಲ್ಲಿ 47 ಅತಿಥಿ ಶಿಕ್ಷಕರನ್ನು ಮಂಜೂರು ಮಾಡಿದ್ದು, ಅದರಲ್ಲಿ 47 ಖಾಲಿ ಹುದ್ದೆಗಳಿಗೆ ಅತಿಥಿ ಶಿಕ್ಷಕರನ್ನು ನೇಮಕ ಮಾಡಿಕೊಳ್ಳಲಾಗಿದೆ.

**6) 2017-18 ನೇ ಸಾಲಿಗೆ ಪದವೀದರ ಪ್ರಾಥಮಿಕ ಶಾಲಾ ಶಿಕ್ಷಕರ (ಎಜಿಟಿ) 70 ಹುದ್ದೆಗಳಿಗೆ ನೇಮಕಾತಿ ಅಧಿಸೂಚನೆ ಹೊರಡಿಸಿದ್ದು, ಸ್ಪರ್ಧಾತ್ಮಕ ಪರೀಕ್ಷೆ ನಡೆಸಲಾಗಿದೆ.**

**7)ಎಸ್.ಎಸ್.ಎಲ್.ಸಿ ಪರೀಕ್ಷೆಯಲ್ಲಿ ಫಲಿತಾಂಶ ವಿವರ:-**

| ವರ್ಷ | ಪರೀಕ್ಷೆಗೆ ಕುಳಿತವರು | ಉತ್ತೀರ್ಣ | ಪ್ರತಿಶತ ಸಾಧನೆ | ರಾಜ್ಯ ಮಟ್ಟದ ರ್‍ಯಾಂಕ್ |
|---|---|---|---|---|
| 2015-16 | 23734 | 18148 | 76.46% | 23 |
| 2016-17 | 22270 | 15178 | 68.15% | 32 |